
# ಪುಸ್ತಕ ಪರಾಗ

## ಪದ್ಮನಾಭ ಭಟ್

### ನುಡಿಯ ನೆರಳು


ವಿಮರ್ಶೆಯ ಮೂಲಕವೇ ಸಾಹಿತ್ಯಜಗತ್ತು ಪ್ರವೇಶಿಸುತ್ತಿರುವವರು ಮಂಜುಳ ಗೋನಾಳ. 'ಕಾವ್ಯಕ್ಕಿಂತ ವಿಮರ್ಶೆ ನನಗಿಷ್ಟವಾದ ಸಾಹಿತ್ಯ ಪ್ರಕಾರ' ಎಂದು ಹೇಳಿಕೊಳ್ಳುವ ಅವರ ಮೊದಲ ಕೃತಿ 'ನುಡಿಯ ನೆರಳು'.




ವಿಮರ್ಶೆಯ ಜಗತ್ತನ್ನು ಹೊಸದಾಗಿ ಪ್ರವೇಶಿಸುತ್ತಿರುವವರಿಗೆ ಇರಬಹುದಾದ ಹಲವು ಮಿತಿಗಳು ಇಲ್ಲಿಯೂ ಇವೆ. ಆದರೆ, ಅವೆಲ್ಲ ಮಿತಿಗಳನ್ನು ಮೀರಿಕೊಳ್ಳುವ ಶಕ್ತಿ ಮಂಜುಳಾ ಅವರಿಗೆ ಇದೆ ಎನ್ನುವುದಕ್ಕೂ ಈ ಕೃತಿಯಲ್ಲಿ ಸಾಕಷ್ಟು ಪುರಾವೆಗಳಿವೆ. ರಿಲ್ಕ್‌ನಿಂದ ವಸುಧೇಂದ್ರರವರೆಗೂ, ರಾಮಧಾನ್ಯ ಚರಿತೆಯಿಂದ ಬಾನು ಮುಷ್ತಾಕ್ ಕಥೆಗಳವರೆಗೂ ಅವರ ಓದಿನ ಹರಹೇ ಅವರ ಮುಂದಿನ ಬರಹಗಳ ಕುರಿತು ಭರವಸೆ ಹುಟ್ಟಿಸುವಂತಿವೆ. ಕೃತಿಗಳ ಮೌಲ್ಯಮಾಪನಕ್ಕಷ್ಟೇ ಸೀಮಿತಗೊಳ್ಳದೆ, ಹೊಸ ತಲೆಮಾರಿನ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿರುವ 'ಅಂತರ್ಜಾಲದಲ್ಲಿನ ಸಮಕಾಲಿನ ಸಾಹಿತ್ಯ'ದಂಥ ಜ್ವಲಂತ ವಿಷಯಗಳ ಕುರಿತೂ ಅವರಿಗೆ ಆಸಕ್ತಿ ಇದೆ. ಆದರೆ, ಅವುಗಳನ್ನು ಇನ್ನಷ್ಟು ಮುಕ್ತವಾಗಿ, ಆಳವಾಗಿ ಗ್ರಹಿಸಬೇಕಾದ ಅಗತ್ಯವಿದೆ. ವಿಮರ್ಶೆಯ ಹತಾರಗಳನ್ನು ಹಿಡಿದುಕೊಂಡೇ ಸಾಹಿತ್ಯದ ಓದಿಗೆ ತೊಡಗಿಕೊಳ್ಳುವುದರ ಬದಲು, ಕೃತಿಯೊಳಗೇ ಸಿಕ್ಕುವ ಪರಿಕರಗಳನ್ನು ಬಳಸಿ ವಿಮರ್ಶಿಸುವ ಅನುಸಂಧಾನದ ದಾರಿ ಹಿಡಿದರೆ ಮಂಜುಳಾ ಅವರಿಂದ ಇನ್ನಷ್ಟು ಒಳನೋಟಗಳುಳ್ಳ ವಿಮರ್ಶೆಯನ್ನು ನಿರೀಕ್ಷಿಸಬಹುದು.

**ನುಡಿಯ ನೆರಳು; ಲೇ: ಮಂಜುಳ ಗೋನಾಳ; ಬೆ: ₹ 120; ಪ್ರ: ನಿರುತ್ತರ; ಫೋನ್: 9900903084**

---




### ಡೇಟಾ ದೇವರು ಬಂದಾಯ್ತು!

ನಾಗಾಲೋಟದಿಂದ ಓಡುತ್ತಿರುವ ತಂತ್ರಜ್ಞಾನ ಜಗತ್ತಿನ ವಿದ್ಯಮಾನಗಳನ್ನು ಹಿಡಿದಿಡುವ ಕೃತಿ ಇದು. 'ಡೇಟಾ ದೇವರು' ಮತ್ತು ಅವನ ಅಂಗಾಂಗಗಳಿಂದ ಹುಟ್ಟಿಕೊಂಡ ಉಳಿದ ತಂತ್ರಜ್ಞಾನ ದೇವತೆಗಳ ಕುರಿತ ಮಾಹಿತಿಪೂರ್ಣ ಹನ್ನೆರಡು ಲೇಖನಗಳು ಇಲ್ಲಿವೆ. ಸೈಬೋರ್ಗ್, ಡ್ರೋನ್, ಕೃತಕ ಬುದ್ಧಿಮತ್ತೆ, ಗುಪ್ತ ಕ್ಯಾಮೆರಾ, ಅಂತರಿಕ್ಷ, ಪ್ಲಾಸ್ಟಿಕ್, ಹೀಗೆ ಹಲವು ವಿಷಯಗಳ ಕುರಿತಾಗಿ ಇರುವ ಈ ಲೇಖನಗಳಲ್ಲಿ ಮಾಹಿತಿಗಳು ತುಂಬಿ ತುಳುಕುತ್ತವೆ. ಆ ಮಾಹಿತಿಗಳನ್ನು ಇನ್ನಷ್ಟು ಸ್ವಾರಸ್ಯವಾಗಿ ಹೇಳುವ ಸಾಧ್ಯತೆ ಇತ್ತು ಎಂತಲೂ ಅನಿಸುತ್ತದೆ. ಪರವೋ ವಿರೋಧವೋ ನಿಂತುಕೊಳ್ಳುವುದಕ್ಕಿಂತ ತಂತ್ರಜ್ಞಾನದ ಶಕ್ತಿ–ಮಿತಿ ಎರಡನ್ನೂ ಅರಿಯುತ್ತಲೇ ಅದು ಸಾಗುತ್ತಿರುವ ಗತಿ ಗುರ್ತಿಸುವ 'ಪತ್ರಕರ್ತ ದೃಷ್ಟಿಕೋನ' ಈ ಲೇಖನಗಳಲ್ಲಿವೆ. ಈ ಎಲ್ಲ ಲೇಖನಗಳು 'ಸುಧಾ'ದಲ್ಲಿ (ಒಂದು ಲೇಖನ 'ಪ್ರಜಾವಾಣಿ') ಪ್ರಕಟವಾದವು ಎಂಬುದು ಇನ್ನೊಂದು ವಿಶೇಷ. ಚಿತ್ರದ ಒಳಪುಟ ವಿನ್ಯಾಸ, ಅಕ್ಷರಗಳ ಫಾಂಟ್, ಚಿತ್ರಗಳ ಬಳಕೆಗಳನ್ನು ಇನ್ನಷ್ಟು ಅಚ್ಚುಕಟ್ಟಾಗಿಸಿದ್ದರೆ ಓದಿನ ಖುಷಿ ಇನ್ನಷ್ಟು ಹೆಚ್ಚುತ್ತಿತ್ತು.

**ಡೇಟಾ ದೇವರು ಬಂದಾಯ್ತು!; ಲೇ: ಗುರುರಾಜ್ ಎಸ್ ದಾವಣಗೆರೆ; ಬೆ: ₹ 150; ಪ್ರ: ಭೂಮಿ ಬುಕ್ಸ್; ಫೋನ್: 9449177628**